sdmimd

# Kannada Prabha

**Date:** July 07, 2014 **Page No.** 02

**Edition:** Mysore **Language:** Kannada

## ಕೃತಿಚೌರ್ಯ ತಡೆಗೆ ಕಾರ್ಯಾಗಾರ



ಮೈಸೂರು: ನಗರದ ಎಸ್‌ಡಿಎಂ– ಐಎಂಡಿ ಸಂಸ್ಥೆಯಲ್ಲಿ ಕೃತಿಚೌರ್ಯ ತಡೆಗಟ್ಟುವ ಬಗ್ಗೆ ಎರಡು ದಿನಗಳ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಕಾರ್ಯಾಗಾರದ ಸಂಚಾಲಕ ಡಾ.ಎಂ.ವಿ. ಸುನಿಲ್ ಮಾತನಾಡಿ, ಕೃತಿಚೌರ್ಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಮತ್ತು ಶೈಕ್ಷಣಿಕ ಸಮಗ್ರತೆ ಕಾಪಾಡುವುದು ಶಿಕ್ಷಕರ ಜವಾಬ್ದಾರಿ ಎಂದು ಹೇಳಿದರು. ಪ್ರಮುಖ ಭಾಷಣಕಾರ ಡಾ.ಆರ್.ಜಗದೀಶ್ ಮಾತನಾಡಿ, ಸಂಶೋಧನೆಯ ಗುಣಮಟ್ಟದ ಬಗ್ಗೆ ಗಮನ ನೀಡಬೇಕು. ಕೃತಿಚೌರ್ಯ ತಡೆಗಟ್ಟುವ ವಿಧಾನಗಳನ್ನು ಶಿಕ್ಷಕ ವರ್ಗದವರು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಉಚಿತವಾಗಿ ದೊರೆಯುವ ತಂತ್ರಾಂಶಗಳನ್ನು ಉಪಯೋಗಿಸುವ ಕೌಶಲ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಉಳಿದಂತೆ ಭಾಷಣಕಾರ ಡಾ.ಸಿ.ಪಿ.ರಾಮಶೇಷ್ ಕೃತಿಚೌರ್ಯದ ಬಗ್ಗೆ ಒಂದು ನೋಟ ವಿಷಯದ ಬಗ್ಗೆ, ಆನಂದ್ ಬೈರಪ್ಪ ಅವರು ಬೌದ್ಧಿಕ ಆಸ್ತಿ ಹಕ್ಕು ಬಗ್ಗೆ ಉಪನ್ಯಾಸ ನೀಡಿದರು. ಇದಕ್ಕೂ ಮೊದಲು ಸಂಸ್ಥೆಯ ಉಪ ನಿರ್ದೇಶಕಿ ಡಾ. ಗಾಯತ್ರಿ ಕಾರ್ಯಾಗಾರ ಉದ್ಘಾಟಿಸಿದರು. ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ನೀಲಂಜನ್ ಸೇನ್ ಗುಪ್ತ ಅತಿಥಿಯಾಗಿದ್ದರು. ಎಂಜಿನಿಯರಿಂಗ್, ವೈದ್ಯಕೀಯ, ಆಯುರ್ವೇದ, ಆಡಳಿತ, ಗ್ರಂಥಾಲಯ ವಿಜ್ಞಾನ, ದಂತ ವೈದ್ಯಕೀಯ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.